ಅಧ್ಯಕ್ಷರು : ಪುನರ್ ಪ್ರಸ್ತಾವವೇನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ'.

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಿರುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಧರಣಿ ನಡೆಸಲು ಸದನದ ಬಾವಿಗೆ ಆಗಮಿಸಿದರು)

ಪುನರ್ ಪ್ರಸ್ತಾವದ ಅಂಗೀಕಾರ

ಶ್ರೀ. ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ,

೨೦೦೭ ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪುನರ್ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ ;

"೨೦೦೭ ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪುನರ್ ಅಂಗೀಕರಿಸುವುದು."

ಪ್ರಸ್ತಾಪ ಪುನರ್ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ತಮ್ಮ ಸ್ಥಾನದಿಂದ) : ಯಾವ ಮುಖ್ಯಮಂತ್ರಿಯಾಗಿರಲಿ, ಉಪ ಮುಖ್ಯಮಂತ್ರಿ ಹಣಕಾಸು ಮಂತ್ರಿಯಾಗಿರಲಿ ಜಾತಿಯಾಧಾರದ ಮೇಲೆ ಯಾರೂ ಹಣ ಕೊಟ್ಟಿಲ್ಲ.